ಪಾರ್ಥೇನಿಯಂ ಕಳೆ

875 (2429) ಶ್ರೀ ಎನ್.ಹೆಚ್. ಗೌಡ (ಕಾಮಟಾ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪಾರ್ಥೇನಿಯಂ ಕಳೆಯಿಂದ ಸಸ್ಯ ಸಂಪತ್ತಿಗಾಗುವ ನಷ್ಟದ ಅರಿವು ಸರ್ಕಾರದಪರಿಗಿದೆಯೆ?

ಆ) ಹಾಗಿದ್ದಲ್ಲಿ ಆ ಕಳೆಯ ನಾಶಕ್ಕಾಗಿ ಸರ್ಕಾರವು ಕೈಗೊಂಡ ಕ್ರಮವೇನು?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಮುಂದೆ ಸರ್ಕಾರದವರು ಕೈಗೊಳ್ಳಬಹುದಾದ ಕ್ರಮಗಳೇನು?

ಶ್ರೀ ಜಿ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅರಣ್ಯ ಪ್ರದೇಶಗಳಲ್ಲಿ ಈ ಕಳೆಯು ಸಸ್ಯ ಸಂಪತ್ತಿಗೆ ನಷ್ಟವಾಗುವಷ್ಟು ಕಂಡು ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎನ್ ಹೆಚ್. ಗೌಡ.—ಅಧ್ಯಕ್ಷರೇ, ಈ ಪಾರ್ಥೇನಿಯಂ ಕಳೆಯು ಪ್ರಭಾವ ಏನು ಎಂಬುದು ಸಾಮಾನ್ಯವಾಗಿ ಯಾರಿಗೂ ಗೊತ್ತಾದಂತೆ ಇಲ್ಲ. ಮಾನ್ಯ ಮಂತ್ರಿಗಳಾಗಲೀ, ಸರ್ಕಾರದ ಗಮನ ಕ್ಕಾಗಲೀ ಇದರಿಂದಾಗುವ ಆಪಾಯ ಬಂದಿರಲಿಕ್ಕಿಲ್ಲವೆಂದು ನನಗನಿಸುತ್ತದೆ. ಅರಣ್ಯ ಉಳಿಸುವುದಕ್ಕೆ ಅಷ್ಟಿಕೋ ಚಳುವಳಿಯನ್ನು ಪ್ರಾರಂಭ ಮಾಡುತ್ತಾರೆ, ಆದೇರೀತಿ ಪಾರ್ಥೇನಿಯಂ ನಿರ್ಮೂಲನೆಗೂ ಚಳುವಳಿಯು ಪ್ರಾರಂಭ ಆಗಬೇಕಾಗಿದೆ. ಈ ಪಾರ್ಥೇನಿಯಂ ಕಳೆ ಸಾಮಾನ್ಯವಾದ ಕಳೆಯಲ್ಲ. ಇದು ರಕ್ತ ಬೀಜಾಸುರನ ರಕ್ತ ಇದ್ದಂತೆ. ಎಲ್ಲೆಲ್ಲಿ ಒಂದು ಹನಿ ರಕ್ತ ಬೀಳುತ್ತೋ ಅಲ್ಲೆಲ್ಲಾ ಅಸುರರು ಹುಟ್ಟಿಕೊಂಡಾಗ ಇವರನ್ನು ಕಾಳಿಮಾತೆ ಸಾಲಿಗೆ ಚಾಚಿ ನಿರ್ಮೂಲನ ಮಾಡುವಂಥ ಪ್ರಸಂಗ ಬಂತು. ಆದೇರೀತಿಯಾಗಿ ಪಾರ್ಥೇನಿಯಂ ಕಳೆ ಬೆಳೆದುಕೊಂಡು ಬರುತ್ತಿದೆ. ಗಾಳಿಯಲ್ಲಿ ಪ್ರಸಾರವಾಗಿ ಎಲ್ಲಾ ಕಡೆಗೂ ಹಬ್ಬುತ್ತಿದೆ. ಬೆಂಗಳೂರು ಒಳ ವಲಯದಲ್ಲಿ ಇದು ಕಾಣುವುದಿಲ್ಲ. ಹೊರ ವಲಯದಲ್ಲಿ ನೋಡಿದರೆ ಗೊತ್ತಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಇದು ಬೆಳೆದುಕೊಂಡು ಬರುತ್ತಿದೆ. ಎಲ್ಲಿ ಪಾರ್ಥೇನಿಯಂ ಕಳೆ ಹುಟ್ಟುತ್ತದೋ ಅಲ್ಲಿ ಬೇರೆ ಯಾವ ಗಿಡಗಳೂ ಹುಟ್ಟುತ್ತಾ ಇಲ್ಲ. ಇದನ್ನು ಯಾವುದಾದರೂ ಹುಡುಗರು ಮೂಸಿ ನೋಡಿದರೆ ಮೂಗಿನಿಂದ ರಕ್ತ ಬರತ್ತದೆ. ನಮಗೆ ಆತಂಕ ಏನೆಂದರೆ, ಅರಣ್ಯ ಇಲಾಖೆಯವರು ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಧಾರವಾಡ ವೃತ್ತದ ಅರಣ್ಯ ಸಂರಕ್ಷಕರು ಹೆಚ್ಚು ಮುತುವರ್ಜಿ ವಹಿಸ ಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ನನ್ನ ಕ್ಷೇತ್ರವಾದ ಕಾಮಟಾ ಸುತ್ತಮುತ್ತಲೂ ಪ್ಲಾಂಟೇಷನ್ ತಯಾರಾಗಿದೆ ಎಂದು ಕಾಣುತ್ತದೆ. ಮಾನ್ಯ ಮಂತ್ರಿಗಳು, ಇದನ್ನು ಪರೀಕ್ಷಿಸಿ, ಇದರಲ್ಲಿ ಬಂದು ಭಾಗಕ್ಕೆ ''ಬ್ಯಾಂದಾವನ'' ಎಂದು ಹೆಸರು ಕೊಟ್ಟಿದ್ದಾರೆ. ಈ ಪಾರ್ಥೇನಿಯಂ ಕಳೆ, ಎಲ್ಲಿ ಬೆಳೆಯುತ್ತದೆ, ಅಲ್ಲಿ ಅಪಾಯಕಾರಿ. ಆದ್ದರಿಂದ, ಇದನ್ನು ನಾಶ ಮಾಡುವುದಕ್ಕೆ ಯಾವ ಕ್ರಮ ಕೈಗೊಳ್ಳುತ್ತೀರಿ.

ಶ್ರೀ ಜಿ. ಎಸ್. ಬಾಗಲಕೋಟ್.—ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಈ ಪಾರ್ಥೇನಿಯಂ ಕಳೆ ಬಗ್ಗೆ ಏನು ಆತಂಕ ವ್ಯಕ್ತಪಡಿಸಿದ್ದಾರೆ, ಅದು ಸತ್ಯ. ಒಂದು ಸಸಿಗೆ 8 ಸಾವಿರ ದಿಂದ 15 ಸಾವಿರದವರೆಗೆ ಮರು ಸಸಿಗಳನ್ನು ಬೆಳೆಸುವ ಶಕ್ತಿ ಇದೆ. ಈ ಪಾರ್ಥೇನಿಯಂ ಕಳೆಯಿಂದ ಅರಣ್ಯ ಇಲಾಖೆಗೆ ಯಾವ ತೊಂದರೆಯೂ ಇಲ್ಲ, ಆದರೆ ಇನ್ನೊಂದು ಜಾತಿಯ ಇಪಟೋರಿಯಂ ಕಳೆ ಬೆಳೆಯುತ್ತಿದೆ. ಈ ಕಳೆಯನ್ನು ಸಾಮಾನ್ಯವಾಗಿ ಇದು ಹೂವು ಬಿಡುವುದಕ್ಕೆ ಮುಂಚೆಯೇ ತೆಗೆದು ಮರುಕಳಿಸದಂತೆ ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಒಟ್ಟಾರೆ, ಈ ಬಗ್ಗೆ ಸದಸ್ಯರ ಕಳಕಳಿ ನಿಜವಾಗಿಯೂ ಕೂಡ ಒಳ್ಳೆಯ ಕಳಕಳಿ.

ಶ್ರೀ ಬಿ.ಡಿ. ಬಸವರಾಜ್.—ಕಾಂಗ್ರೆಸ್ ಪಾರ್ಥೇನಿಯಂ ಕಳೆ ಜಾಸ್ತಿಯಾಗಿದೆ, ಇದಕ್ಕೆ ಏನು ಮಾಡುತ್ತೀರಿ?

ಶ್ರೀ ಜಿ.ಎಸ್. ಬಾಗಲಕೋಟಿ.—ಈ ಕಾಂಗ್ರೆಸ್ ಕಳೆಯನ್ನು ಕಳೆಯುವುದಕ್ಕೆ ಬೆಂಗಳೂರು ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು ಬೇರೆ ಕಳೆಯನ್ನು ನಿರ್ಮಾಣ ಮಾಡಿದ್ದಾರೆ. ಇದರಿಂದ ಈ ಕಾಂಗ್ರೆಸ್ ಕಳೆಯನ್ನು ನಾಶಮಾಡುವುದಕ್ಕೆ ಸಾಧ್ಯವಿದೆ. ಈ ಕಳೆಗೆ ಬೇರೆ ಹೆಸರು ಕೂಡ ಇಡಬಹುದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಪಾರ್ಥೇನಿಯಂ ಕಳೆಗೆ ಕಾಂಗ್ರೆಸ್ ಕಳೆ ಎಂದು ಹೇಳುತ್ತಾರೆ. ಇದಕ್ಕೆ ಗುಂಡೂರಾಯರ ಸರ್ಕಾರದಲ್ಲಿ ಒಂದು ಕ್ರಮ ತೆಗೆದುಕೊಂಡಿದ್ದರು. ಇದು ಬಹಳ ವೈಲ್ಡ್ ಆಗಿ ಬೆಳೆಯುತ್ತಿರುವುದರಿಂದ ಇದರ ನಿರ್ಮೂಲನ ಮಾಡಬೇಕೆಂದು ಅವರು ಕ್ರಮ ಕೈಗೊಂಡಿದ್ದರು.

ಶ್ರೀ ಜೆ.ಹೆಚ್. ಪಟೇಲ್.—ಕಾಂಗ್ರೆಸ್ ಕಳೆ ಬಹಳ ವೈಲ್ಡ್ ಆಗಿ ಬೆಳೆಯುತ್ತಾ ಬಂತು. ಇದು ಹಾನಿಕರ ಎಂದು ಈಗ ಒಂದು ಜನತಾ ಕಳೆ ಎಂದು ಮಾಡಿದ್ದೇವೆ. ಇದು ಬೇರೆ ಸಸಿಗಳಿಗೆ ಹಾನಿ ಮಾಡುವುದಿಲ್ಲ, ಬರೀ ಕಾಂಗ್ರೆಸ್ ಕಳೆಗೆ ಮಾತ್ರ ಹಾನಿ ಮಾಡುತ್ತದೆ.

ಗೋಕಾಕ್ ಪಟ್ಟಣದಲ್ಲಿ ನೂಲಿನ ಅಭಾವ ಮತ್ತು ನೂಲು ಮಾರಾಟ ಮಳಿಗೆ ಸ್ಥಾಪಿಸುವುದರ ಬಗ್ಗೆ

876 (2635) ಶ್ರೀ ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗೋಕಾಕ್ ಪಟ್ಟಣದಲ್ಲಿ ನೇಕಾರರಿಗೆ ನೂಲು ಸಿಗದೆ ಬೇರೆ ಸ್ಥಳಗಳಿಂದ ನೂಲು ತಂದು ನೇಯುತ್ತಿರುವುದರಿಂದ ಅವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಗೋಕಾಕ್ ಪಟ್ಟಣದಲ್ಲಿ ನೂಲು ಮಾರಾಟ ಮಳಿಗೆ ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಹಾಗಿಲ್ಲದಿದ್ದಲ್ಲಿ ಈ ಮಾರಾಟ ಮಳಿಗೆ ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಎಂ. ರಘುಪತಿ (ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಬಂದಿದೆ.

ಆ) ಗೋಕಾಕ್‌ದಲ್ಲಿ ನೂಲು ಮಳಿಗೆ ಸ್ಥಾಪಿಸುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ನಿಗಮಕ್ಕೆ ತಿಳಿಸಲಾಗಿದೆ.

ಇ) ಸೂಕ್ತ ಕಟ್ಟಡ ದೊರಕಿದೊಡನೆ ಪ್ರಾರಂಭಿಸಲಾಗುವುದು.

ಶ್ರೀ ಎಂ.ಎಲ್. ಮುತ್ತಣ್ಣವರ್.—ಅಧ್ಯಕ್ಷರೇ, ನೂಲು ಮಳಿಗೆಗೆ ಕಟ್ಟಡದ ವ್ಯವಸ್ಥೆ ಕೂಡಾ ಮಾಡಿಕೊಟ್ಟಿದ್ದೇವೆ. ಆದ್ದರಿಂದ ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಆಯಿತು, ಕಟ್ಟಡ ಸಿಕ್ಕಿದೆ, ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಿದ್ದೇನೆ.

ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಾಸದಿಂದ ಉಂಟಾಗಿರುವ ನಷ್ಟ

877 (2437) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ವಿದ್ಯುತ್ ಪೂರೈಕೆಯಲ್ಲಿ ವೋಲ್ಟೇಜುಗಳಲ್ಲಿ ವ್ಯತ್ಯಾಸವಾಗುವುದರಿಂದ ಉದ್ದಿಮೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮ ಏನು ?

ಆ) ವಿದ್ಯುಚ್ಛಕ್ತಿಯ ಪೂರೈಕೆಯಲ್ಲಿ ದೋಷಗಳು ಉಂಟಾಗುವುದರಿಂದ ಉದ್ದಿಮೆಗಾರರ ಉತ್ಪಾದನೆ ಹಾಗೂ ಯಂತ್ರಗಳಿಗೆ ಆಗಿರುವ ಹಾನಿಗಳಿಗಾಗಿ ಉದ್ದಿಮೆ ಸಂಸ್ಥೆಗಳು ದೂರು ಸಲ್ಲಿಸಿ ಮಂಡಳಿಯಿಂದ ವಸೂಲು ಮಾಡಿರುವ ಹಣವೆಷ್ಟು ? (ಕಳೆದ ಮೂರು ವರ್ಷಗಳ ವಿವರ ನೀಡುವುದು)

ಇ) ಕಳೆದ 3 ವರ್ಷಗಳಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಯಲ್ಲಿ ವೋಲ್ಟೇಜು ದೋಷಗಳಿಂದ ಸುಟ್ಟು ಹೋಗಿರುವ ರೈತರ ಪಂಪುಸೆಟ್ಟು ಮೋಟಾರುಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವರ್ಷವಾರು ವಿವರ ನೀಡುವುದು).

ಈ) ವಿದ್ಯುಚ್ಛಕ್ತಿಯ ದೋಷಗಳಿಂದಾಗಿ ಆಗುತ್ತಿರುವ ನಷ್ಟ, ಉದ್ದಿಮೆದಾರರಿಗೆ ಮತ್ತು ರೈತರಿಗೆ ಆಗುತ್ತಿರುವ ನಷ್ಟದ ಮೊತ್ತ ಎಷ್ಟು ಹಾಗೂ ಕೃಷಿಕರ ಉತ್ಪನ್ನಗಳ ಮತ್ತು ಉದ್ದಿಮೆಗಳ ಉತ್ಪನ್ನಗಳ ಹಾನಿ ಎಷ್ಟು ? (ವಿವರ ನೀಡುವುದು)

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು). —

ಅ) ರಾಜ್ಯದಲ್ಲಿ ವೋಲ್ಟೇಜ್‌ನಲ್ಲಿನ ವ್ಯತ್ಯಾಸ ಮಿತಿಯಲ್ಲಿದ್ದು ಉದ್ದಿಮೆಗಳಿಗೆ ಹಾನಿಯಾಗುವಂತಹ ವ್ಯತ್ಯಾಸಗಳಾಗುತ್ತಿಲ್ಲ. ಮಂಡಳಿ ವಿದ್ಯುತ್ತಿನ ವ್ಯವಸ್ಥೆಯ ಸುಧಾರಣೆಗೆ ಮತ್ತು ಸ್ಥಿರತೆಗೆ ಕ್ರಮ ಕೈಗೊಳ್ಳುತ್ತಿದೆ. ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

1. ಅಧಿಕ ಲೋಡು, ಕಡಿಮೆ ಲೋಡು ವೇಳೆಗಳಲ್ಲುಂಟಾಗುವ ವೋಲ್ಟೇಜಿನ ವ್ಯತ್ಯಾಸ ಪರಿಪಡಿಸಲು ಸ್ಟೇಷನ್‌ಗಳಲ್ಲಿ ಟ್ರಾನ್ಸ್‌ಫಾರ್ಮರುಗಳಲ್ಲಿ ಅಗತ್ಯ ಹೊಂದಿಕೆ ಮಾಡಲಾಗುತ್ತಿದೆ.
2. ವೋಲ್ಟೇಜಿನ ಸ್ಥಿತಿ ಉತ್ತಮ ಪಡಿಸಲು 11 ಕೆ.ವಿ. ಲೈನಿಗೆ ಕೆಪ್ಯಾಸಿಟರ್‌ಗಳನ್ನು ಅಳವಡಿಸಲಾಗುತ್ತಿದೆ.
3. ಲೋಡು ಸೆಂಟರ್‌ಗಳ ಹತ್ತಿರ ಸಬ್ ಸ್ಟೇಷನ್ ಸ್ಥಾಪಿಸಲಾಗುತ್ತಿದೆ.
4. ಹೆಚ್ಚುವರಿ ಪ್ರಸಾರಣಾ ಮಾರ್ಗ ಹಾಕಲಾಗುತ್ತಿದೆ.
5. ಟ್ರಾನ್ಸ್‌ಫಾರ್ಮರುಗಳ ಸಾಮರ್ಥ್ಯ ಹೆಚ್ಚಿಸಲಾಗುತ್ತಿದೆ.

ಆ) ಉತ್ಪಾದನಾ ಅಥವಾ ಯಂತ್ರಗಳಿಗಾಗುವ ನಷ್ಟಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪರಿಹಾರ ಕೊಡುವುದಿಲ್ಲ.

ಇ) ವಿವರಗಳನ್ನು ಸಂಗ್ರಹಿಸುವುದಿಲ್ಲ.

ಈ) ಉದ್ಯಮೆ ಉತ್ಪಾದನೆಯಲ್ಲಿ ಆಗುವ ನಷ್ಟದ ಬಗ್ಗೆ ಸರ್ಕಾರದಲ್ಲಿ ಮಾಹಿತಿಯಿರುವುದಿಲ್ಲ. ವೋಲ್ಟೇಜ್ ವ್ಯತ್ಯಾಸವು ರೈತರ ನಷ್ಟಕ್ಕೆ ಕಾರಣವಲ್ಲ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದಂಥ ವಿಚಾರ. ಕೆ.ಇ.ಬಿ.ಯವರು ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ವೋಲ್ಟೇಜ್ ಡ್ರಾಪ್‌ಔಟ್‌ಗೆ ಸಾಕಷ್ಟು ಕ್ರಮಗಳನ್ನು ಇವರು ತೆಗೆದುಕೊಂಡಿದ್ದಾರೆ. ಸರಕಾರ ಇದರ ಬಗ್ಗೆ ಸಾಕಷ್ಟು ಲಕ್ಷ್ಯ ವಹಿಸಿದೆ. ಆದರೂ ಸಹಿತ ವೋಲ್ಟೇಜ್ ಡ್ರಾಪ್ ಆಗುತ್ತಿದೆ, ಅನಿರೀಕ್ಷಿತವಾಗಿ ಕರೆಂಟ್ ನಿಂತುಹೋಗುತ್ತಿದೆ. ಈ ಒಂದು ಕಾರಣದಿಂದಾಗಿ ರೈತ ಬಹಳ ದೊಡ್ಡ ಹೊರೆಯನ್ನು ಹೊರುತ್ತಿದ್ದಾನೆ. ವಿದ್ಯುಚ್ಛಕ್ತಿ ಪೂರೈಕೆಯ ದೋಷದಿಂದ ಪಂಪ್‌ಸೆಟ್ ಮೋಟಾರುಗಳು ಸುಟ್ಟುಹೋಗಿ ರೈತರಿಗೆ ಬಹಳ ಲುಕ್ಸಾನಾಗುತ್ತಿದೆ. ಇದರ ಬಗ್ಗೆ ಅಂಕಿ ಸಂಖ್ಯೆಗಳನ್ನು (ಏನಾದರೂ ಇವರು ಇಟ್ಟುಕೊಂಡಿದ್ದಾರೆಯೇ ಎಂದರೆ, ಏನೂ ಅಂಕಿ ಸಂಖ್ಯೆಗಳನ್ನು) ಇಟ್ಟುಕೊಂಡಿಲ್ಲ. ಇದರ ಬಗ್ಗೆ ಮಾಹಿತಿ ಸಂಗ್ರಹಿಸಿದಲ್ಲಿ ಇದು ಗೊತ್ತಾಗುತ್ತದೆ. ಮಾಹಿತಿ ಸಂಗ್ರಹಿಸಬೇಕೆಂದು ದಯವಿಟ್ಟು ಕೇಳುತ್ತಿದ್ದೇನೆ. ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಹೆಚ್ಚು ಸುಧಾರಣೆ ಮಾಡಬೇಕಾದರೆ ಇದರ ಅಂಕಿ ಸಂಖ್ಯೆಗಳನ್ನು ಇಟ್ಟುಕೊಳ್ಳುವುದು ಅವಶ್ಯ ಇದೆ. ಆದೇ ಪ್ರಕಾರವಾಗಿ ಈಗ ಉದ್ದಿಮೆಗಳಲ್ಲಿ ಸ್ವಾಕಷ್ಟು ಸ್ವಯಂಚಾಲಿತ ಮತ್ತು ಪೂರ್ಣ ಆಟೋಮ್ಯಾಟಿಕ್ ಮೆಷಿನರಿಗಳು ಏನು ಬಂದಿವೆ, ಇದರಲ್ಲೂ ಸಹಿತ, ವೋಲ್ಟೇಜ್ ಡ್ರಾಪ್ ಮೂಲಕ, ಅನಿರೀಕ್ಷಿತವಾಗಿ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸುವುದರ ಮೂಲಕ, ಬಹಳಷ್ಟು ಲುಕ್ಸಾನಾಗುತ್ತಿದೆ.

ಈ ಯಂತ್ರಗಳು ಬಹಳಷ್ಟು ಲುಕ್ಸಾನಿಗೆ ಗುರಿಯಾಗಿರುವುದು ಕಂಡುಬಂದಿದೆ. ಇದನ್ನು ಅನೇಕ ಉದ್ದಿಮೆದಾರರು ತಿಳಿದುಕೊಂಡು ಸ್ವಂತ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಮಾಹಿತಿ ಸಂಗ್ರಹಿಸಿದರೆ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಇನ್ನೂ ಹೆಚ್ಚು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರಕಾರ ಕೆ.ಇ.ಬಿ ಯ ಮೂಲಕ ಮಾಹಿತಿ ಸಂಗ್ರಹಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ದೊಡ್ಡ ಇಂಡಸ್ಟ್ರಿಗಳಿಗೂ ಮತ್ತು ರೈತರಿಗೂ ಉತ್ತಮ ಸೇವೆಯನ್ನು ಸಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರೈತರ ಪಂಪ್‌ಸೆಟ್‌ಗಳು ಸುಟ್ಟು ಹೋಗುವ ಬಗ್ಗೆ ಅಂಕಿಅಂಶಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್ ಷೆಡ್ಡಿಂಗ್ ಸೆಂಟರ್ಸ್‌ಗೆ ಬಹಳ ದೂರ ಈ ಪಂಪ್‌ಸೆಟ್‌ಗಳು ಇದ್ದರೆ ಈ ಸಮಸ್ಯೆ ಬರುತ್ತದೆ. ಇದನ್ನು ಕೂಡ ಬದಲಾವಣೆ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಸಾಮಾನ್ಯವಾಗಿ ಪಂಪ್‌ಸೆಟ್‌ಗಳಾಗಲಿ, ಮೋಟಾರುಗಳಾಗಲಿ ಸುಟ್ಟು ಹೋಗುವುದಕ್ಕೆ ಅನೇಕ ಕಾರಣಗಳು ಇವೆ. ಒಂದೊಂದು ಸಾರಿ ಸಿಂಗಲ್ ಫೇಜ್ ಇದ್ದರೆ, ಸ್ಟಾರ್ಟರ್ಸ್ ಸರಿಯಾಗಿಲ್ಲದಿದ್ದರೆ ಅಥವಾ ಮೆಷನರಿಯಲ್ಲಿ ಏನಾದರೂ ಡಿಫೆಕ್ಟ್ಸ್ ಇದ್ದರೆ ಅಂತಹ ಸಂದರ್ಭಗಳಲ್ಲಿಯೂ ಸಹ ಮೋಟಾರುಗಳು ಸುಟ್ಟು ಹೋಗುತ್ತವೆ. ಆದರೆ ಬರೀ ವೋಲ್ಟೇಜ್ ಕಡಿಮೆ ಇದ್ದಿದ್ದರಿಂದಲೇ ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತವೆನ್ನುವುದು ಸರಿಯಲ್ಲ. ಕಡಿಮೆ ವೊಲ್ಟೇಜ್ ಕಡಿಮೆ ಇದ್ದ ಸಮಯದಲ್ಲಿ ಒಳ್ಳೆಯ ಸ್ಟಾರ್ಟರ್ಸ್ ಇದ್ದರೆ ಆಗ ಮೋಟಾರುಗಳಿಗೆ ಏನು ಆಗುವುದಿಲ್ಲ. ವೊಲ್ಟೇಜ್ ಕಡಿಮೆ ಇದ್ದರೆ ಪಂಪ್‌ಸೆಟ್‌ಗಳು ರನ್ ಆಗುವುದೇ ಇಲ್ಲ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಅಂಕಿಅಂಶಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. ಪಂಪ್‌ಸೆಟ್‌ಗಳು ವೊಲ್ಟೇಜ್ ಪ್ರಾಬ್ಲಂನಿಂದಲೇ ಸುಟ್ಟು ಹೋಗುವುದಿಲ್ಲ. ಮತ್ತು ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಆಟೋ ಹೋಗುವುದು ಮೆಟಿಕ್ ಮೋಟಾರುಗಳನ್ನು ಇಟ್ಟುಕೊಂಡಿರುತ್ತಾರೆ. ಅಲ್ಲಿ ಇಂತಹ ಮೋಟಾರುಗಳು ಸುಟ್ಟು ಹೋಗುವುದು ಕಡಿಮೆ ಎಂದು ಮಾನ್ಯ ಸದಸ್ಯರು ಹೇಳಿದರು. ಇದರಲ್ಲಿ ಕೂಡ ಸಮಸ್ಯೆ ಜಾಸ್ತಿ ಇರುವುದಿಲ್ಲ. ಇಂಡಸ್ಟ್ರಿಗಳಿಗೆ ಲೋಡ್ ಷೆಡ್ಡಿಂಗ್‌ಸೆಂಟರ್ಸ್ ಟ್ರಾನ್ಸ್‌ಫಾರಮ್ಸ್ ಪಕ್ಕದಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿರುತ್ತಾರೆ. ಆದ್ದರಿಂದ ಅವರಿಗೆ ಆ ರೀತಿಯ ತೊಂದರೆ ಬರುವುದಿಲ್ಲ. ರೈತರಿಗೆ ಈ ಸಮಸ್ಯೆ ಜಾಸ್ತಿ ಇರುತ್ತದೆ. ಆದರೂ ಕೂಡ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇಂಡಸ್ಟ್ರಿಗಳಲ್ಲಿ ವಿದ್ಯುಚ್ಛಕ್ತಿ ಹೋದರೆ ಅವರು ತಕ್ಷಣ ಮಂಡಲಿಗೆ ತಿಳಿಸುತ್ತಾರೆ. ಆಗ ಅದನ್ನು ಸರಿಪಡಿಸಿ ಕೊಡುವ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಪಂಪ್‌ಸೆಟ್‌ಗಳಲ್ಲಿ ಸ್ಟಾರ್ಟರ್ ಸರಿಯಾಗಿರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ರೈತರು ಪಂಪ್‌ಸೆಟ್‌ಗಳನ್ನು ಚಾಲೂ ಮಾಡಿ ಹೋಗುತ್ತಾರೆ. ಇದ್ದಕ್ಕಿದ್ದ ಹಾಗೆ ಲೋಡ್ ಷೆಡ್ಡಿಂಗ್ ಆಗಿ ಕರೆಂಟ್ ಹೋಗುತ್ತದೆ. ಆಗ ಸ್ಟಾರ್ಟರ್ ಕೆಲಸ ಮಾಡುವುದಿಲ್ಲ. ಇದರಿಂದ ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತವೆ. ಆದರೆ ಇಂಡಸ್ಟ್ರಿಗಳಿಗೆ ಲೋಡ್ ಷೆಡ್ಡಿಂಗ್ ಸೆಂಟರ್ಸ್ ಅನ್ನು ಪಕ್ಕದಲ್ಲಿಯೇ ಕೊಟ್ಟಿರುತ್ತಾರೆ. ಆದರಿಗೆ ಆದ್ದರಿಂದ ಅಷ್ಟು ತೊಂದರೆಯಾಗುವುದಿಲ್ಲ. ಅಲ್ಲದೆ ಅವರು ಆಟೋಮೆಟಿಕ್ ಮೆಷನರಿಗಳನ್ನು ಇಟ್ಟುಕೊಂಡಿರುತ್ತಾರೆ. ಮತ್ತು ದೊಡ್ಡ ದೊಡ್ಡ ಇಂಡಸ್ಟ್ರಿಗಳವರು ಟ್ರಾನ್ಸ್‌ಫಾರಮ್ ಕಂಟ್ರೋಲ್ ಮಾಡುವಂತಹ ವ್ಯವಸ್ಥೆ ಇಟ್ಟುಕೊಂಡಿರುತ್ತಾರೆ ಈ ರೀತಿ ಇದ್ದರೂ ಸಹ ಅನಿರೀಕ್ಷಿತವಾಗಿ ವಿದ್ಯುಚ್ಛಕ್ತಿ ಹೋಗುತ್ತದೆ. ಇದರಿಂದ ಅವರ ರಾ ಮೆಟೀರಿಯಲ್ಸ್‌ಗೆ ನಷ್ಟವಾಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ರೈತರ ಬೆಳೆಗೆ ತೊಂದರೆ ಮಾಡಬೇಕು, ಅವರಿಗೆ ನಷ್ಟ ಮಾಡಬೇಕು ಎನ್ನುವ ಉದ್ದೇಶ ನಮಗಿಲ್ಲ. ಒಂದೊಂದು ಸಾರಿ ಅನಿರೀಕ್ಷಿತವಾಗಿ ವಿದ್ಯುತ್ ಹೋಗುತ್ತದೆ. ಕಾರಣ ಆಂಧ್ರ ಪ್ರದೇಶದಿಂದ, ಮಹಾರಾಷ್ಟ್ರದಿಂದ ಮತ್ತು ಎನ್.ಟಿ.ಪಿ.ಸಿ. ಯಿಂದ ವಿದ್ಯುತ್ ತಗುವಾಗ ಕೆಲವು ಸಲ ನಿಂತು ಹೋಗುತ್ತದೆ. ಆಗ ಲೋಡ್ ಷೆಡ್ಡಿಂಗ್ ಆಗುತ್ತದೆ. ಆಗ ಗ್ರಾಹಕರು ಸಹಾಧಾನ ಮಾಡಿಕೊಳ್ಳಬೇಕು. ರೈತರು ಕೂಡ ಉತ್ತಮ ಸ್ಟಾರ್ಟರ್ಸ್, ಉಪಯೋಗಿಸಬೇಕು. ಕಡಿಮೆ ಬೆಲೆ ಸ್ಟಾರ್ಟರ್ ಹಾಕಿದರೆ ಪಂಪ್‌ಸೆಟ್ ಸುಟ್ಟು ಹೋಗುತ್ತದೆ. ಡೊಪ್ಲಿಕೇಟ್ ಸ್ಟಾರ್ಟರ್ಸ್ ಇರುತ್ತವೆ. ಅವುಗಳನ್ನು ಉಪಯೋಗಿಸಬಾರದು ವೋಲ್ಟೇಜ್ ಕಡಿಮೆಯಾದಾಗ ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತವೆ. ಆದ್ದರಿಂದ ಇಂತಹ ಕಳಪೆ ಸ್ಟಾರ್ಟರ್ಸ್ ವ್ಯಾಪಾರ ಮಾಡುವುದನ್ನು ತಡೆಗಟ್ಟಲಾಗುವುದು.

ದಕ್ಷಿಣ ಕನ್ನಡಜಿಲ್ಲೆಯಲ್ಲಿ ಅಧಿಕೃತವಾಗಿ ಹಾಗೂ ಅನಧಿಕೃತವಾಗಿ ಶಿಲೆಯನ್ನು ತೆಗೆಯುವುದು

೮೭೮ (೨೩೯೯) ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನಧಿಕೃತವಾಗಿ ಹಾಗೂ ಅಧಿಕೃತವಾಗಿ ಪ್ರಮಾಣಕ್ಕಿಂತ ಹೆಚ್ಚಿಗೆ ಶಿಲೆಕಲ್ಲು, ಕೆಂಪುಕಲ್ಲು ಕಡಿಯುವುದು ಮರಳು ತೆಗೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಆದ ಆರ್ಥಿಕ ನಷ್ಟವೆಷ್ಟು ? (ವಿವರ ಒದಗಿಸುವುದು)

ಇ) ಈ ವಿಷಯದಲ್ಲಿ ನಡೆಯುವ ಅವ್ಯವಹಾರವನ್ನು ತಡೆಗಟ್ಟಲು ಪರವಾನಿಗಿ ನೀಡುವ ಅಧಿಕಾರವನ್ನು ಜಿಲ್ಲಾ ಪರಿಷತ್ತಿನ ಮೂಲಕ ಮಂಡಲ ಪಂಚಾಯಿತಿಗೆ ಒಪ್ಪಿಸಲು ಪರ್ಯಾಲೋಚಿಸುವುದೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು):—

ಅ) ಹೌದು. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ ೧೯೬೯ರ ಮೇರೆಗೆ ನೀಡಿರುವ ಗುತ್ತಿಗೆಗಳಲ್ಲಿ ಇಷ್ಟೇ ಪ್ರಮಾಣದಲ್ಲಿ ಗಣಿಗಾರಿಕೆ ಮಾಡಬೇಕೆಂದೇನೂ ನಿಗದಿಪಡಿಸಿರುವುದಿಲ್ಲ.

ಆ) ಅನಧಿಕೃತವಾಗಿ ನಡೆಯುವ ಕ್ವಾರಿಯಿಂದ ಇಂತಿಷ್ಟೇ ನಷ್ಟವಾಗಿದೆ ಎಂದು ಹೇಳಲು ಬರುವುದಿಲ್ಲ. ಆದರೆ ಅಲ್ಲಲ್ಲಿ ಆಗಾಗ ಕಂಡು ಬರುವ ಈ ರೀತಿಯ ಅನಧಿಕೃತ ಗಣಿಗಾರಿಕೆಯನ್ನು ಮುಂದುವರೆಸದಂತೆ ಇಲಾಖೆ ತಡೆಗಟ್ಟುತ್ತಿದೆ.

ಇ) ಜಿಲ್ಲಾ ಪರಿಷತ್ತಿಗೆ ಒಪ್ಪಿಸುವ ಯೋಜನೆ ಇಲ್ಲ. ಈ ಬಗೆಯ ಅವ್ಯವಹಾರಗಳನ್ನು ಕೆ.ಎಂ.ಎಂ.ಸಿ.ಆರ್. ೧೯೬೯ರ ನಿಯಮಾನುಸಾರ ತಡೆಗಟ್ಟಲಾಗುತ್ತಿದೆ. ಅನಧಿಕೃತ ಗಣಿಗಾರಿಕೆಯನ್ನು ಯಶಸ್ವಿಯಾಗಿ ತಡೆಗಟ್ಟಲು ನಿಯಮಗಳನ್ನು ಬಿಗಿದು ಪಡಿ ಮಾಡಲಾಗುವುದು.

(ಶ್ರೀ ವಸಂತ ವಿ. ಸಾಲಿಯಾನ ಅವರ ಪರವಾಗಿ ಶ್ರೀ ಜಿ. ಎಸ್. ಆಚಾರ್‌ರವರು ಪ್ರಶ್ನೆ ಕೇಳಿದರು)

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳ ಪ್ರಕಾರ ಇಷ್ಟೇ ಪ್ರಮಾಣ ದಲ್ಲಿ ಗಣಿಗಾರಿಕೆ ಮಾಬೇಕೆಂದು ನಿಗದಿಪಡಿಸಿಲ್ಲ ಎಂದರೆ, ಎಷ್ಟು ಬೇಕಾದರೂ ಅನಿರ್ಧಿಷ್ಟವಾಗಿ, ಅನಧಿಕೃತವಾಗಿ ಗಣಿಗಾರಿಕೆ ಮಾಡಬಹುದೇ? ಈ ಅನಧಿಕೃತ ಗಣಿಗಾರಿಕೆಯಿಂದ ಸರ್ಕಾರಕ್ಕೆ ಬರತಕ್ಕ ಹಣದಲ್ಲಿ ಬಹಳಷ್ಟು ಪೋಲಾಗುತ್ತಿದೆ. ಅದೂ ಅಲ್ಲದೆ ಅದರಿಂದ ರಾಯಲ್ಟಿಯನ್ನೂ ಕೂಡ ಸರಿಯಾಗಿ ವಸೂಲು ಮಾಡಿಲ್ಲ. ಲಕ್ಷಾಂತರ ರೂಪಾಯಿಗಳಷ್ಟು ಸರ್ಕಾರಕ್ಕೆ ಲಾಭ ಬರತಕ್ಕ, ಈ ಕಲ್ಲು ಕೆಲಸಕ್ಕೆ ಕೇವಲ ೫ ಜನ ಮಾತ್ರ ಪರವಾನಿಗೆಯನ್ನು ತೆಗೆದುಕೊಂಡಿದ್ದಾರೆ. ಅನಧಿಕೃತವಾಗಿ ಗಣಿಗಾರಿಕೆ ಮಾಡುವ ಎಷ್ಟು ಜನ ಕಲ್‌ಪ್ರಿಟ್‌ಗಳನ್ನು ತಾವು ಹಿಡಿದಿದ್ದೀರಿ? ಸರ್ಕಾರದ ಕೈಯಲ್ಲಿ ರಾಯಲ್ಟಿಯನ್ನು ವಸೂಲಿ ಮಾಡುವುದಕ್ಕೆ ಆಗದಿದ್ದರೆ, ಜಿಲ್ಲಾಪರಿಷತ್ತುಗಳಿಗೆ ಮತ್ತು ಮಂಡಲ ಪಂಚಾಯಿತಿಗಳಿಗಾ ದರೂ ವಸೂಲು ಮಾಡತಕ್ಕ ಅಧಿಕಾರವನ್ನು ವಹಿಸಿಕೊಡಿ. ಸರ್ಕಾರಕ್ಕೆ ಬರತಕ್ಕ ಹಣದಲ್ಲಿ ದುರ್ವನಿ ಯೋಗ ಆಗಬಾರದೆನ್ನುವುದೇ ನನ್ನ ಸೂಚನೆ.

ಶ್ರೀ ರಮೇಶ ಸಿ. ಜಿಗಜಿಣಗಿ.—ಈ ಎಲ್ಲಾ ವಿಷಯವನ್ನು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಸಮಗ್ರವಾಗಿ ಒಂದು ಅಮೆಂಡ್‌ಮೆಂಟ್‌ನ್ನು ತರಬೇಕೆಂದು ಸರ್ಕಾರ ಉದ್ದೇಶಿಸಿದೆ. ಏಕೆಂದರೆ, ಸರ್ಕಾರಿ ಜಮೀನಿನಲ್ಲಿರತಕ್ಕ ಖನಿಜಗಳನ್ನು ತೆಗೆಯುವುದಕ್ಕೆ ರೆವಿನ್ಯೂ ಡಿಪಾರ್ಟ್‌ಮೆಂಟಿನವರೂ ಲೈಸೆನ್ಸ್‌ಗಳನ್ನು ಕೊಡುತ್ತಾರೆ. ನಾವೂ ಸಹ ಲೈಸೆನ್ಸ್‌ಗಳನ್ನು ಕೊಡುತ್ತಿದ್ದೇವೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ಒಂದೇ ವ್ಯಾಪ್ತಿಯಲ್ಲಿ ಈ ಅಧಿಕಾರವನ್ನು ಅಂದರೆ, ಲೈಸೆನ್ಸ್ ಕೊಡತಕ್ಕ ಅಧಿಕಾರವನ್ನು ಕೂಡ ಬೇಕೆನ್ನುವ ಬಗ್ಗೆ ಒಂದು ಅಮೆಂಡ್‌ಮೆಂಟ್ ತರುತ್ತೇವೆ. ಆಮೇಲೆ ಎಷ್ಟು ಕಡೆ ಅನಧಿಕೃತವಾಗಿ ಕಲ್ಲು ಸಾಗಣೆ ಮಾಡುತ್ತಿದ್ದವರನ್ನು ಹಿಡಿದಿದ್ದೀರೆಂದು ಕೇಳಿದ್ದಾರೆ. ಅದರ ಆ ಬಗ್ಗೆ ಒಂದು ವರದಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.